ಕರ್ನಾಟಕ ಸರ್ಕಾರ

ಸಂಖ್ಯೆ: ಗ್ರಾಅಪ 769 ಗ್ರಾಪಂಅ 2020

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:15-07-2021

ಸುತ್ತೋಲೆ

ವಿಷಯ: ಗ್ರಾಮ ಪಂಚಾಯಿತಿ ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರಗಳ ಪರಿವೀಕ್ಷಣೆ ಮಾಡಿ ಕುಂದುಕೊರತೆಗಳನ್ನು ನಿವಾರಿಸುವ ಬಗ್ಗೆ.

ಉಲ್ಲೇಖ:
1. ಸರ್ಕಾರದ ಆದೇಶ ಸಂಖ್ಯೆ: ಇಡಿ 64 ಎಲ್‌ಐಬಿ 2015, ದಿನಾಂಕ: 26-02-2019.
2. ಸರ್ಕಾರದ ಸುತ್ತೋಲೆ ಸಂಖ್ಯೆ : ಗ್ರಾಅಪ 1108 ಗ್ರಾಪಂಅ 2017, ದಿನಾಂಕ : 19-03-2019.
3. ಸರ್ಕಾರದ ಆದೇಶ ಸಂಖ್ಯೆ: ಇಡಿ 64 ಎಲ್‌ಐಬಿ 2015, ದಿನಾಂಕ: 24-07-2019.
4. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 490 ಗ್ರಾಪಂಅ 2019, ದಿನಾಂಕ :18-02-2020.
5. ಸರ್ಕಾರದ ಸುತ್ತೋಲೆ ಸಂಖ್ಯೆ: ಗ್ರಾಅಪ 790 ಗ್ರಾಪಂಅ 2020, ದಿನಾಂಕ:15-10-2020
6. ಸನ್ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ದಿನಾಂಕ 06.02.2021 ರಂದು ಕರ್ನಾಟಕ ರಾಜ್ಯ ವಿಕೇಂದ್ರೀಕರಣ ಮತ್ತು ಅಭಿವೃದ್ಧಿ ಸಮಿತಿ ನಡೆದ ಸಭೆಯ ನಡವಳಿ.
7. ಸರ್ಕಾರ ಪ್ರಧಾನ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ದಿನಾಂಕ 05 ಮತ್ತು 06 ಏಪ್ರಿಲ್-2021 ರಂದು ನಡೆದ ಕಾರ್ಯಾಗಾರದ ನಡವಳಿ.
8. ದಿನಾಂಕ:07-04-2021 ರಂದು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರು ರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿ.
9. ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿಪಿಆರ್ 62 ಜಿಪಿಎಸ್ 2020 ಬೆಂಗಳೂರು ದಿನಾಂಕ:26-05-2021.
10. ದಿನಾಂಕ:14-06-2021 ರಂದು ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಅಧ್ಯಕ್ಷತೆಯಲ್ಲಿ ಶಿವಮೊಗ್ಗದಲ್ಲಿ ನಡೆದ ಸಭೆಯ ನಡವಳಿ.

* * * * *

**ಪ್ರಸ್ತಾವನೆ:**

ಉಲ್ಲೇಖ(1)ರ ಸರ್ಕಾರಿ ಆದೇಶ ಸಂಖ್ಯೆ: ಇಡಿ 64 ಎಲ್‌ಐಬಿ 2015, ದಿನಾಂಕ:26.02.2019 ರಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ಸಾರ್ವಜನಿಕ ಗ್ರಂಥಾಲಯ ಇಲಾಖೆಯಿಂದ ನಡೆಯುತ್ತಿದ್ದ 5622 ಗ್ರಂಥಾಲಯಗಳ ನಿರ್ವಹಣೆಯನ್ನು ದಿನಾಂಕ:01.03.2019 ರಿಂದ ಜಾರಿಗೆ ಬರುವಂತೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ವರ್ಗಾಯಿಸಲಾಗಿದೆ. ಉಲ್ಲೇಖ(3)ರ ಆದೇಶದಲ್ಲಿ 5622 ಗ್ರಂಥಾಲಯಗಳನ್ನು ಗ್ರಾಮ ಪಂಚಾಯಿತಿಗಳ ವ್ಯಾಪ್ತಿಗೆ ನೀಡಿ ಆದೇಶಿಸಲಾಗಿದೆ. ಗ್ರಾಮ ಪಂಚಾಯಿತಿಗಳ ವತಿಯಿಂದ ಆಸ್ತಿ ತೆರಿಗೆ ಮೇಲೆ ವಿಧಿಸಲಾಗುವ ಶೇಕಡ 6ರ ಉಪಕರವನ್ನು ಗ್ರಂಥಾಲಯಗಳ ಅಭಿವೃದ್ಧಿಗೆ ಬಳಸಿಕೊಳ್ಳಲು ತಿಳಿಸಲಾಗಿದೆ. ಜೊತೆಗೆ ಗ್ರಾಮ ಪಂಚಾಯಿತಿ ಸ್ವಂತ ಸಂಪನ್ಮೂಲವನ್ನು ಸಹ ಬಳಕೆ ಮಾಡಿಕೊಳ್ಳಲು ತಿಳಿಸಲಾಗಿದೆ. ರಾಜ್ಯದ ಹಲವಾರು ಗ್ರಾಮ ಪಂಚಾಯಿತಿಗಳ ಗ್ರಂಥಾಲಯಗಳನ್ನು ಡಿಜಿಟಲೀಕರಣಗೊಳಿಸಿ ಬಹುವಿಧವಾಗಿ ಅಭಿವೃದ್ಧಿಪಡಿಸಿವೆ. ಕೋವಿಡ್-19 ಹಿನ್ನೆಲೆಯಲ್ಲಿ ಶಾಲೆಗಳು ಮುಚ್ಚಿರುವ ವೇಳೆ ಗ್ರಾಮಾಂತರ ಪ್ರದೇಶದ ಮಕ್ಕಳು ಓದುವ ಹವ್ಯಾಸವನ್ನು ಮುಂದುವರಿಸಲು ಓದುವ ಬೆಳಕು ಕಾರ್ಯಕ್ರಮವನ್ನು ಜಾರಿಗೆ ತರಲಾಯಿತು. ಈ ಕಾರ್ಯಕ್ರಮದಡಿ 6 ರಿಂದ 18 ವರ್ಷದ ಒಳಗಿನ ಮಕ್ಕಳನ್ನು ಗ್ರಂಥಾಲಯಗಳಿಗೆ ಉಚಿತವಾಗಿ ಸೇರ್ಪಡೆ ಮಾಡಲಾಗಿದೆ. ಗ್ರಾಮ ಪಂಚಾಯಿತಿ ಗ್ರಂಥಾಲಯಗಳ ವ್ಯಾಪ್ತಿಯನ್ನು

ವಿಸ್ತರಿಸಿ ಗ್ರಂಥಾಲಯಗಳ ಜೊತೆಗೆ ಮಾಹಿತಿ ಕೇಂದ್ರವಾಗಿಯೂ ಮಾರ್ಪಡಿಸಲು ತೀರ್ಮಾನಿಸಲಾಯಿತು. 2021-22 ನೇ ಸಾಲಿನ ರಾಜ್ಯದ ಆಯವ್ಯಯದಲ್ಲಿಯೂ ಈ ಬಗ್ಗೆ ಘೋಷಿಸಲಾಯಿತು. ಈ ಹಿನ್ನೆಲೆಯಲ್ಲಿ ದಿನಾಂಕ 26.05.2021ರ ಸರ್ಕಾರದ ಆದೇಶದಲ್ಲಿ ರಾಜ್ಯದ ಗ್ರಾಮ ಪಂಚಾಯಿತಿ ಗ್ರಂಥಾಲಯಗಳನ್ನು 'ಗ್ರಾಮ ಪಂಚಾಯಿತಿ ಗ್ರಂಥಾಲಯ ಹಾಗೂ ಮಾಹಿತಿ ಕೇಂದ್ರ' ಎಂದು ಮರು ಪದನಾಮೀಕರಿಸಲಾಗಿದೆ.

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 58 ರಲ್ಲಿ ಉಲ್ಲೇಖಿಸಿರುವ ಗ್ರಾಮ ಪಂಚಾಯಿತಿಗಳ ಪ್ರಕಾರ್ಯಗಳಲ್ಲಿ ಗ್ರಂಥಾಲಯಗಳ ಅಭಿವೃದ್ಧಿಯೂ ಸೇರಿದೆ. ಗ್ರಂಥಾಲಯಗಳಿಗೆ ಬೇಕಾಗುವ ಮೂಲಸೌಕರ್ಯಗಳಾದ ನಿವೇಶನ, ಕಟ್ಟಡ/ಓದುವ ಕೊಠಡಿ, ಕಾಂಪೌಂಡ್, ವಿದ್ಯುತ್ ಸಂಪರ್ಕ, ವಿದ್ಯುತ್ ಬಿಲ್ಲು ಪಾವತಿ, ಕುಡಿಯುವ ನೀರು ಸರಬರಾಜು, ಶೌಚಾಲಯ, ಕುರ್ಚಿ, ಟೇಬಲ್, ಬೆಂಚುಗಳು, ಗೋಡೆ ಬರಹ, ಡಿಜಿಟಲೀಕರಣ, ಇಂಟರ್‌ನೆಟ್ ವ್ಯವಸ್ಥೆ ಮುಂತಾದ ನೆರವುಗಳನ್ನು ಒದಗಿಸುವುದು ಗ್ರಾಮ ಪಂಚಾಯಿತಿಗಳ ಜವಾಬ್ದಾರಿಯಾಗಿರುತ್ತದೆ. ಈ ಉದ್ದೇಶಕ್ಕಾಗಿ ಗ್ರಾಮ ಪಂಚಾಯಿತಿಗಳು ತಮ್ಮ ಸ್ವಂತ ಸಂಪನ್ಮೂಲದ ಜೊತೆಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಒದಗಿಸುವ ಶಾಸನಬದ್ಧ ಅನುದಾನ, ಜಲಜೀವನ್ ಮಿಷನ್, ಮನರೇಗಾ ಮುಂತಾದ ಯೋಜನೆಗಳ ಅನುದಾನವನ್ನು ಬಳಸಿಕೊಳ್ಳಬಹುದಾಗಿದೆ.

ಈ ಹಿನ್ನೆಲೆಯಲ್ಲಿ ಗ್ರಾಮ ಪಂಚಾಯಿತಿಗಳು ಗ್ರಂಥಾಲಯಗಳ ಸ್ಥಿತಿಗತಿಗಳನ್ನು ಅಧ್ಯಯನ ಮಾಡಿ ಕುಂದುಕೊರತೆಗಳನ್ನು ನಿವಾರಿಸಬೇಕಾಗಿದೆ. ಈ ಬಗ್ಗೆ ಉಲ್ಲೇಖ (6) ರ ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ವಿವರವಾಗಿ ಚರ್ಚಿಸಲಾಗಿರುತ್ತದೆ. ಉಲ್ಲೇಖ (7), (8) ಹಾಗೂ (10) ರ ಸಭೆಗಳಲ್ಲಿ ವಿಸ್ತೃತವಾಗಿ ಚರ್ಚಿಸಲಾಗಿದೆ.ಈ ಉದ್ದೇಶಕ್ಕಾಗಿ ಗ್ರಾಮ ಪಂಚಾಯಿತಿಗಳು ಗ್ರಂಥಾಲಯಗಳ ಅಧ್ಯಯನಕ್ಕೆ ಭೇಟಿ ನೀಡಲು ಅನುಕೂಲವಾಗುವಂತೆ ಸರ್ಕಾರದ ವತಿಯಿಂದ ನಮೂನೆಗಳನ್ನು ಸಿದ್ಧಪಡಿಸಿ ಅನುಬಂಧದಲ್ಲಿರಿಸಲಾಗಿದೆ. ಈ ನಮೂನೆಗಳು ಗ್ರಂಥಾಲಯಗಳನ್ನು ಅಧ್ಯಯನ ಮಾಡಲು ಮಾರ್ಗದರ್ಶಿಯಾಗಿರುತ್ತವೆ ಹೊರತು ಅಂತಿಮವಾಗಿರುವುದಿಲ್ಲ. ಸ್ಥಳೀಯ ಸನ್ನಿವೇಶಕ್ಕನುಗುಣವಾಗಿ ಇನ್ನೂ ಹೆಚ್ಚಿನ ವಿಷಯಗಳನ್ನು ತಿಳಿದು ಗ್ರಂಥಾಲಯಗಳನ್ನು ಅಭಿವೃದ್ಧಿಪಡಿಸಬಹುದಾಗಿದೆ.

ಗ್ರಾಮ ಪಂಚಾಯಿತಿ ವತಿಯಿಂದ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಸದಸ್ಯರುಗಳು ಕಾಲಕಾಲಕ್ಕೆ ಅಥವಾ ಕನಿಷ್ಠ ಮೂರು ತಿಂಗಳಿಗೊಮ್ಮೆ ತಮ್ಮ ವ್ಯಾಪ್ತಿಯ ಗ್ರಂಥಾಲಯಕ್ಕೆ ಭೇಟಿ ನೀಡಿ ಗ್ರಂಥಾಲಯ ಮೇಲ್ವಿಚಾರಕರು ಹಾಗೂ ಓದುಗರೊಂದಿಗೆ ಸಮಾಲೋಚಿಸಿ ಅಲ್ಲಿನ ಕುಂದುಕೊರತೆಗಳ ಬಗ್ಗೆ ತಿಳಿದುಕೊಂಡು ಅವುಗಳನ್ನು ನಿವಾರಿಸಲು ಸಕಾರಾತ್ಮಕ ಕ್ರಮಗಳನ್ನು ಕೈಗೊಳ್ಳಬೇಕೆಂಬುದು ಸರ್ಕಾರದ ಆಶಯವಾಗಿದೆ. ಮಕ್ಕಳು, ಮಹಿಳೆಯರು, ಹಿರಿಯ ನಾಗರೀಕರು, ವಿಶೇಷ ಚೇತನರು ಸೇರಿದಂತೆ ಗ್ರಾಮೀಣ ಪ್ರದೇಶದ ಜನರು ಗ್ರಂಥಾಲಯದ ಪ್ರಯೋಜನವನ್ನು ಪಡೆಯುವಂತೆ ಅಭಿವೃದ್ಧಿಪಡಿಸಬಹುದಾಗಿದೆ.ಈ ಬಗ್ಗೆ ಗ್ರಾಮ ಪಂಚಾಯಿತಿ ಸಭೆಗಳಲ್ಲಿ ಹಾಗೂ ತ್ರೈಮಾಸಿಕವಾಗಿ ನಡೆಯುವ ಕೆ.ಡಿ.ಪಿ. ಸಭೆಗಳಲ್ಲಿಯೂ ಚರ್ಚಿಸಿ ಕ್ರಮ ಕೈಗೊಳ್ಳಬಹುದಾಗಿದೆ.

ಗ್ರಾಮ ಪಂಚಾಯಿತಿಗಳು ಗ್ರಂಥಾಲಯಕ್ಕೆ ನೀಡಿದ ಭೇಟಿ ಹಾಗೂ ಕೈಗೊಂಡ ಕ್ರಮಗಳ ಬಗ್ಗೆ ವರದಿಯನ್ನು ಪಂಚತಂತ್ರದಲ್ಲಿ ಅಳವಡಿಸಲು ತಿಳಿಸಲಾಗಿದೆ.

(ಉಮಾ ಮಹದೇವನ್)
ಸರ್ಕಾರದ ಪ್ರಧಾನ ಕಾರ್ಯದರ್ಶಿ (ಪಂ.ರಾಜ್)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಗೆ:

1. ಆಯುಕ್ತರು, ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ, ಜಿಲ್ಲಾ ಪಂಚಾಯತ್ ಕಟ್ಟಡ, ಕೆ.ಜಿ.ರಸ್ತೆ, ಬೆಂಗಳೂರು.
2. ನಿರ್ದೇಶಕರು, ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆ, ಮೈಸೂರು.

3. ನಿರ್ದೇಶಕರು, ಸಾರ್ವಜನಿಕ ಗ್ರಂಥಾಲಯ ಇಲಾಖೆ, ಬೆಂಗಳೂರು.
4. ಎಲ್ಲಾ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್‌ಗಳು,
5. ಎಲ್ಲಾ ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್‌ಗಳು.
6. ಎಲ್ಲ್ಲಾ ಗ್ರಾಮ ಪಂಚಾಯತಿಗಳ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು.

<u>ಪ್ರತಿ</u>

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿ,
2. ಸರ್ಕಾರದ ಪ್ರಧಾನ ಕಾರ್ಯದರ್ಶಿ (ಪಂ.ರಾಜ್) ರವರ ಆಪ್ತ ಕಾರ್ಯದರ್ಶಿಗಳವರು.
3. ಉಪಾಧ್ಯಕ್ಷರು, ಕರ್ನಾಟಕ ರಾಜ್ಯ ವಿಕೇಂದ್ರಿಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿ, ಬೆಂಗಳೂರು.
4. ಸಂಪಾದಕರು, ಕರ್ನಾಟಕ ವಿಕಾಸ ಪತ್ರಿಕೆ/ವೆಬ್‌ಸೈಟ್, ಗ್ರಾ.ಅ ಮತ್ತು ಪಂ.ರಾಜ್ ಇಲಾಖೆ.
5. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿ.

ಕರ್ನಾಟಕ ಸರ್ಕಾರ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಗ್ರಾಮ ಪಂಚಾಯಿತಿ ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರದ ಭೇಟಿ: ಕುಂದು-ಕೊರತೆ ಅಧ್ಯಯನ

ಜಿಲ್ಲೆಯ ಹೆಸರು:

ತಾಲ್ಲೂಕಿನ ಹೆಸರು:

ಗ್ರಾಮ ಪಂಚಾಯಿತಿ ಹೆಸರು:

| | | |
|---|---|---|
| 1 | ಭೇಟಿ ನೀಡಿದ ದಿನಾಂಕ ಮತ್ತು ಸಮಯ | |
| 2 | ಗ್ರಾಮ ಪಂಚಾಯಿತಿ ಗ್ರಂಥಾಲಯ ಇರುವ ಸ್ಥಳ/ವಿಳಾಸ: | |
| 3 | ಮೇಲ್ವಿಚಾರಕರ ಹೆಸರು | |
| 4 | ಮೇಲ್ವಿಚಾರಕರ ವಿದ್ಯಾರ್ಹತೆ | |
| 5 | ಮೇಲ್ವಿಚಾರಕರಿಗೆ ಗ್ರಂಥಾಲಯ ತರಬೇತಿ ಆಗಿದೆಯೇ? (ಡಿಜಿಟಲೀಕರಣ/ಇತರೆ ಕೌಶಲ್ಯ). ತರಬೇತಿ ಆಗಿದ್ದಲ್ಲಿ ವಿವರಿಸಿ. | |
| 6 | ಗ್ರಂಥಾಲಯ ಕಾರ್ಯನಿರ್ವಹಿಸುತ್ತಿರುವ ದಿನಗಳು (ವಾರದಲ್ಲಿ ಎಷ್ಟು ದಿನಗಳು/ವಾರದ ರಜೆ ಇದ್ದಲ್ಲಿ ಯಾವ ದಿನ?) ಸಮಯ/ಅವಧಿ (ಬೆಳಿಗ್ಗೆ ಮತ್ತು ಸಾಯಂಕಾಲ)/ | |
| **7** | **ಗ್ರಂಥಾಲಯದ ಕಟ್ಟಡ ಮತ್ತು ಮೂಲಭೂತ ಸೌಲಭ್ಯಗಳು** | |
| 7.1 | ಗ್ರಂಥಾಲಯ ಕಟ್ಟಡದ ನಿವೇಶನ ಯಾರ ಹೆಸರಲ್ಲಿದೆ? | |
| 7.2 | ಕಟ್ಟಡವು – ಸರ್ಕಾರದ/ಬಾಡಿಗೆ/ಇತರೆ | |
| 7.3 | ಕೊಠಡಿಗಳ ಸಂಖ್ಯೆ | |
| 7.4 | ಗ್ರಂಥಾಲಯದಲ್ಲಿ ಓದುಗರಿಗೆ ಓದಲು ಅಗತ್ಯವಿರುವಷ್ಟು ಸ್ಥಳವಕಾಶ ಇದೆಯೇ? | |
| 7.5 | ಕಟ್ಟಡದ ಸ್ಥಿತಿ (ಉತ್ತಮ/ಶಿಥಿಲಗೊಂಡಿದೆ) | |
| 7.6 | ವಿಶೇಷ ಚೇತನರಿಗಾಗಿ ರ್‍ಯಾಂಪ್ ಮತ್ತು ರ್‍ಯಾಲೀಸ್ (ಕಂಬಿಗಳು) ವ್ಯವಸ್ಥೆ ಇದೆಯೇ? | |
| 7.7 | ಕುಡಿಯುವ ನೀರಿನ ವ್ಯವಸ್ಥೆ ಇದೆಯೇ? | |
| 7.8 | ಶೌಚಾಲಯ ವ್ಯವಸ್ಥೆ ಮತ್ತು ಬಳಕೆಗೆ ಸೂಕ್ತವಾಗಿದೆಯೇ? | |
| 7.9 | ವಿಶೇಷ ಚೇತನರ ಬಳಕೆಗೆ ಸೂಕ್ತವಾದ ಶೌಚಾಲಯ ವ್ಯವಸ್ಥೆ ಇದೆಯೇ? | |
| 7.10 | ವಿದ್ಯುತ್ ಸಂಪರ್ಕ ವ್ಯವಸ್ಥೆಯ ಕುರಿತು (ಇದೆ/ಇಲ್ಲ/ಇದ್ದಲ್ಲಿ ವಿದ್ಯುತ್ ಬಿಲ್ ಪಾವತಿಸಲಾಗಿದೆಯೇ?) | |
| 7.11 | ಯು.ಪಿ.ಎಸ್. ವ್ಯವಸ್ಥೆ ಮಾಡಲಾಗಿದೆಯೇ? | |
| 7.12 | ಫ್ಯಾನ್ ಮತ್ತು ಉತ್ತಮ ಗಾಳಿ, ಬೆಳಕು ವ್ಯವಸ್ಥೆ ಇದೆಯೇ? | |
| 7.13 | ಪ್ರಿಂಟರ್ ಮತ್ತು ಜೆರಾಕ್ಸ್ ಮಿಷನ್ (ಇದೆ/ಇಲ್ಲ) | |
| 7.14 | ಕಂಪ್ಯೂಟರ್ ಇವೆಯೇ? ಇದ್ದಲ್ಲಿ ಕಂಪ್ಯೂಟರ್ ಗಳ ಸಂಖ್ಯೆ | |
| 7.15 | ಇಂಟರ್ನೆಟ್ ವ್ಯವಸ್ಥೆ ಮಾಡಲಾಗಿದೆಯೇ? | |
| 7.16 | ಗ್ರಂಥಾಲಯವನ್ನು ಡಿಜಿಟಲೀಕರಣ ಗೊಳಿಸಲಾಗಿದೆಯೇ? ಹೌದು/ಇಲ್ಲ ಹೌದಾದಲ್ಲಿ ವಿವರಿಸಿ | |
| 7.17 | ಗ್ರಂಥಾಲಯದಲ್ಲಿ ಬ್ರೈಲ್ ಹಾಗೂ ಶ್ರವ್ಯ ಪುಸ್ತಕಗಳನ್ನು ವ್ಯವಸ್ಥೆ ಮಾಡಲಾಗಿದೆಯೇ? | |
| 7.18 | ಸ್ಕ್ರೀನ್ ರೀಡರ್ ಇದೆಯೇ? | |

| | | |
|---|---|---|
| 7.19 | ಗ್ರಂಥಾಲಯಕ್ಕೆ ಆವರಣ ಇದೆಯೇ? | |
| 7.20 | ಆವರಣದಲ್ಲಿ ಓದಲು ಆಸನದ ವ್ಯವಸ್ಥೆ ಮಾಡಲಾಗಿದೆಯೇ? | |
| 8 | ಪೀಠೋಪಕರಣಗಳು | |
| 8.1 | ಟೇಬಲ್ ಗಳ ಸಂಖ್ಯೆ | |
| 8.2 | ಚೇರ್ ಗಳ ಸಂಖ್ಯೆ | |
| 8.3 | ಬೆಂಚ್ ಗಳ ಸಂಖ್ಯೆ | |
| 8.4 | ರ‍್ಯಾಕ್ ಗಳ ಸಂಖ್ಯೆ (ವಿವಿಧ ಅಳತೆಯ ರ‍್ಯಾಕ್ ಗಳಿದ್ದಲ್ಲಿ ವಿವರಿಸಬೇಕು) | |
| 9 | ಪುಸ್ತಕಗಳ ಮಾಹಿತಿ | |
| 9.1 | ಒಟ್ಟು ಪುಸ್ತಕಗಳ ಸಂಖ್ಯೆ | |
| 9.2 | ಮಕ್ಕಳ ಪುಸ್ತಕಗಳ ಸಂಖ್ಯೆ | |
| 9.3 | ಸ್ಪರ್ಧಾ ಪರೀಕ್ಷೆಗಳ ಪುಸ್ತಕಗಳ ಸಂಖ್ಯೆ | |
| 9.4 | ರಾಜ್ಯ/ಜಿಲ್ಲೆಯಿಂದ ಸ್ವೀಕರಿಸಲಾದ ಪುಸ್ತಕಗಳ ಸಂಖ್ಯೆ | |
| 9.5 | ದೈನಿಕ ಮತ್ತು ನಿಯತಕಾಲಿಕ ಪತ್ರಿಕೆಗಳ ಸಂಖ್ಯೆ | |
| 9.6 | ಸ್ಥಳೀಯವಾಗಿ ದೇಣಿಗೆದಾರರಿಂದ ಸಂಗ್ರಹಿಸಲಾದ ಪುಸ್ತಕಗಳ ಸಂಖ್ಯೆ | |
| 9.7 | ದೇಣಿಗೆದಾರರಿಂದ ಸಂಗ್ರಹಿಸಲಾದ ಸಾಮಗ್ರಿಗಳ ವಿವರ | |
| 9.8 | ಸರ್ಕಾರದ ಸುತ್ತೋಲೆ ಸಂಖ್ಯೆ: ಕಪಂರಾಇ/ಅಭಿವೃದ್ಧಿ/೧೪/೨೦೨೧ ದಿನಾಂಕ ೦೧-೦೨-೨೦೨೧ ಸೇರಿದಂತೆ ಇಲಾಖೆಯಿಂದ ನೀಡಲಾದ ಆದೇಶಗಳಂತೆ ಪುಸ್ತಕಗಳ ಪಟ್ಟಿ ಇಡಲಾಗಿದೆಯೇ ಪುಸ್ತಕಗಳನ್ನು ಇಡಲಾಗಿದೆಯೇ? | |
| **10** | **"ಓದುವ ಬೆಳಕು" ಕಾರ್ಯಕ್ರಮ (ಸುತ್ತೋಲೆಯಲ್ಲಿ ತಿಳಿಸಿರುವಂತೆ)** | |
| 10.1 | ಪಂಚಾಯಿತಿ ವ್ಯಾಪ್ತಿಯಲ್ಲಿನ 6-18 ವರ್ಷದ ಎಲ್ಲ ಮಕ್ಕಳ ನೊಂದಣಿ ಆಗಿದೆಯೇ? | |
| 10.2 | ಮಕ್ಕಳಿಗಾಗಿ ಪ್ರತ್ಯೇಕ ವಿಭಾಗವಿದೆಯೇ? | |
| 10.3 | ಗ್ರಂಥಾಲಯ ಗೋಡೆ ಮೇಲೆ ಮ್ಯೂರಲ್ ಕಲಾ ಚಿತ್ರಗಳು/ಇತರೆ ಕಲಾ ಚಿತ್ರಗಳು ಇದೆಯೇ? | |
| 10.4 | ಮಕ್ಕಳಿಗೆ ಸಂಬಂಧಿಸಿದ ವಿಷಯ ಪ್ರಕಟಿಸಲು ಮತ್ತು ಅವರ ವೈಯಕ್ತಿಕ ಕೌಶಲವನ್ನು ಪ್ರಕಟಿಸಲು ಪ್ರತ್ಯೇಕವಾಗಿ ನಾಮ ಫಲಕ ಇದೆಯೇ? | |
| 10.5 | ಗ್ರಂಥಾಲಯದ ಡಿಜಿಟಲೀಕರಣದ ಪ್ರಯೋಜನ ಪಡೆಯುತ್ತಿರುವ ಮಕ್ಕಳ ಸಂಖ್ಯೆ | ಗಂಡು+ಹೆಣ್ಣು= ಒಟ್ಟು |
| 10.6 | ಪುಸ್ತಕವನ್ನು ಓದಲು ಮನೆಗೆ ತೆಗೆದುಕೊಂಡು ಹೋಗುತ್ತಿರುವ ಮಕ್ಕಳ ಸಂಖ್ಯೆ | ಗಂಡು+ಹೆಣ್ಣು= ಒಟ್ಟು |
| **11** | **ಚಟುವಟಿಕೆಗಳು/ಕಾರ್ಯಕ್ರಮಗಳು** | |
| 11.1 | ಗ್ರಂಥಾಲಯದಲ್ಲಿ ಮಕ್ಕಳಿಗೆ ಚಟುವಟಿಕೆಗಳನ್ನು ನಡೆಸಲಾಗುತ್ತಿದೆಯೇ? | |
| 11.3 | ಗ್ರಂಥಾಲಯದಲ್ಲಿ ಮಕ್ಕಳ ಆಟದ ಸಾಮಾಗ್ರಿಗಳಿವೆಯೇ ಮತ್ತು ಮಕ್ಕಳಿಗೆ ಆಟ ಆಡಲು ಕೊಡಲಾಗುತ್ತಿದೆಯೇ? | |
| 11.4 | ಗ್ರಂಥಾಲಯದಲ್ಲಿ ವಿಜ್ಞಾನ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆಯೇ? ವಿವರಿಸಿ | |
| 11.5 | ಗ್ರಂಥಾಲಯದಲ್ಲಿ ನಿಯಮಿತವಾಗಿ ವಿವಿಧ ಕಾರ್ಯಕ್ರಮಗಳನ್ನು ನಡೆಸುತ್ತಿದ್ದಲ್ಲಿ ವಿವರಿಸಿ. | |
| **12** | **ಮಾಹಿತಿ ನಿರ್ವಹಣೆ** | |
| 12.1 | ಅಭಿವೃದ್ಧಿ ಯೋಜನೆಗಳ ಕುರಿತು ಮಾಹಿತಿ ನೀಡಲು ಪ್ರತ್ಯೇಕ ನಾಮ ಫಲಕ ಇದೆಯೇ? | |
| 12.3 | ವಿವಿಧ ಸರ್ಕಾರಿ ಅಭಿವೃದ್ಧಿ ಮತ್ತು ಇತರೆ ಯೋಜನೆಗಳ ಕುರಿತು ಮಾಹಿತಿ ಸಂಗ್ರಹಿಸಿ ಇಡಲಾಗಿದೆಯೇ? | |
| 12.4 | ಅಭಿವೃದ್ಧಿ ಮತ್ತು ಇತರೆ ಯೋಜನೆಗಳ ಕುರಿತು ಮಾಹಿತಿಗಳು ಜನರಿಗೆ ದೊರಕುವಂತಿವೆಯೇ? | |
| **13** | **ಓದುಗರ ವಿವರ** | |

| | | |
|---|---|---|
| 13.1 | ನೋಂದಣಿಯಾದ ಒಟ್ಟು ಸದಸ್ಯರ ಸಂಖ್ಯೆ | |
| 13.2 | ನೊಂದಾಯಿಸಿಕೊಳ್ಳಲಾದ ಒಟ್ಟು ಮಕ್ಕಳ ಸಂಖ್ಯೆ | |
| 13.3 | ನೊಂದಾಯಿಸಿಕೊಳ್ಳಲಾದ ಮಹಿಳೆಯರ ಸಂಖ್ಯೆ | |
| 13.4 | ನೊಂದಾಯಿಸಿಕೊಳ್ಳಲಾದ ಹಿರಿಯ ನಾಗರೀಕರ ಸಂಖ್ಯೆ | |
| 14 | ದಾಖಲೆಗಳ ನಿರ್ವಹಣೆ | |
| 14.1 | ಸದಸ್ಯರ ಪುಸ್ತಕ ಸರಿಯಾದ ಕ್ರಮದಲ್ಲಿ ಇದೆಯೇ? | |
| 14.2 | ಓದುಗರ ಸಲಹಾ ಪುಸ್ತಕ ಇದೆಯೇ? | |
| 14.3 | ಓದುಗರ ಅಭಿಪ್ರಾಯ/ಸಲಹೆಗಳನ್ನು ಪರಿಗಣಿಸಲಾಗುತ್ತಿದೆಯೇ? | |
| 14.4 | ಸಲಹಾ ಸಮಿತಿ ರಚಿಸಲಾಗಿದೆಯೇ? | |
| 14.5 | ಸಮಿತಿ ಸಭೆ ನಡೆಸಿ, ನಿರ್ಣಯಗಳನ್ನು ಜಾರಿಗೊಳಿಸಲಾಗುತ್ತಿದೆಯೇ? | |
| 15 | ಗ್ರಂಥಾಲಯವನ್ನು ಅಭಿವೃದ್ಧಿಪಡಿಸಲು ಗ್ರಾಮ ಪಂಚಾಯಿತಿಯಿಂದ ನಿರೀಕ್ಷಿಸಲಾದ ಸೇವೆ/ಸೌಲಭ್ಯಗಳು? | |

- ಗ್ರಂಥಾಲಯ ಭೇಟಿಯನ್ನು ಗ್ರಾಮ ಪಂಚಾಯಿತಿ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ಸದಸ್ಯರು ಕೈಗೊಳ್ಳಬಹುದು.
- ಭೇಟಿಯ ಬಗ್ಗೆ ಮುಂಚಿತವಾಗಿ ತಿಳಿಸಬೇಕು. ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಅಥವಾ ಅವರು ನಿಯೋಜಿಸಿದ ಕಾರ್ಯದರ್ಶಿ/ದ್ವಿತೀಯ ದರ್ಜೆ ಲೆಕ್ಕ ಸಹಾಯಕ ಸಮಿತಿಯ ಜೊತೆ ಭೇಟಿ ನೀಡಿ ಗಮನಿಸಿದ ಅಂಶಗಳನ್ನು ದಾಖಲಿಸಿ, ಮುಂದುವರಿಕೆ ಕ್ರಮಗಳನ್ನು ಕೈಗೊಳ್ಳಲು ನೆರವಾಗಬೇಕು.
- ಗ್ರಂಥಾಲಯದ ಕೊಂದು ಕೊರತೆಗಳು ಮತ್ತು ನಿರೀಕ್ಷೆಗಳ ಕುರಿತು ಗ್ರಾಮ ಪಂಚಾಯಿತಿ ಸಿಬ್ಬಂದಿ ಮತ್ತು ಓದಗರೊಂದಿಗೆ ಚರ್ಚಿಸಬೇಕು.
- ಗ್ರಂಥಾಲಯ ಭೇಟಿ ವೇಳೆ ಗುರುತಿಸಲಾದ ಪೀಠೋಪಕರಣಗಳು, ಪುಸ್ತಕಗಳು ಮತ್ತು ಇತರೆ ಮೂಲಬೂತ ಸೌಲಭ್ಯಗಳ ಕೊರತೆಗಳು ಇದ್ದಲ್ಲಿ ಅವುಗಳನ್ನು ಬಗೆಹರಿಸಲು ಗ್ರಾಮ ಪಂಚಾಯಿತಿಯಿಂದ ಕ್ರಮ ಕೈಗೊಳ್ಳಬೇಕು.
- ಗ್ರಂಥಾಲಯವನ್ನು ಉತ್ತಮ ಮಾಹಿತಿ ಕೇಂದ್ರ ಮತ್ತು ಜ್ಞಾನ ಕೇಂದ್ರವಾಗಿ ಪರಿವರ್ತಿಸಲು ಸಂಬಂಧಿಸಿದಂತೆ ಗ್ರಾಮ ಪಂಚಾಯಿತಿಯ ದೂರದೃಷ್ಟಿ ಯೋಜನೆ ಹಾಗೂ ವಾರ್ಷಿಕ ಕ್ರಿಯಾ ಯೋಜನೆಗಳಲ್ಲಿ ಸೇರಿಸಲು ಕ್ರಮ ಕೈಗೊಳ್ಳಬೇಕು. ಕೈಗೊಂಡ ಕ್ರಮದ ಬಗ್ಗೆ ಕೆ.ಡಿ.ಪಿ. ತ್ರೈಮಾಸಿಕ ಸಭೆಯಲ್ಲಿ ಚರ್ಚಿಸಬೇಕು.

ಭೇಟಿ ನೀಡಿದವರ ಹೆಸರು ಮತ್ತು ಸಹಿ

| ಹೆಸರು | ಸಹಿ |
|---|---|
| | |
| | |

ah